# ಕನ್ನಡ ರಂಗಭೂಮಿಯಲ್ಲಿ ಮಹಿಳೆಯರ ಪಾತ್ರ : ವಿಮರ್ಶಾತ್ಮಕ ಅಧ್ಯಯನ

**ಅನುರಾಧ ವಿ.[*] & ಜ್ಯೋತಿಲಕ್ಷ್ಮೀ ಡಿ.ಪಿ.[**]**

DOI: https://doi.org/10.5281/zenodo.22108215

**ABSTRACT**

ಈ ವಿಮರ್ಶಾತ್ಮಕ ಅಧ್ಯಯನವು ಕನ್ನಡ ರಂಗಭೂಮಿಯಲ್ಲಿ ಮಹಿಳೆಯರ ಪಾತ್ರವನ್ನು ಕುರಿತು ವಿಶ್ಲೇಷಿಸುತ್ತದೆ. ಮಹಿಳೆಯರು ರಂಗಭೂಮಿ ಕ್ಷೇತ್ರದಲ್ಲಿ ಹೇಗೆ ತಮ್ಮ ಪಾತ್ರವನ್ನು ನಿರ್ವಹಿಸಿದ್ದಾರೆ ಎಂಬುದನ್ನು ಈ ಲೇಖನವು ಬೆಳಕು ಚೆಲ್ಲುತ್ತದೆ. ಭಾರತೀಯ ಕಲಾ ಪರಂಪರೆಯ ಮಹತ್ವದ ಭಾಗವಾದ ಕನ್ನಡ ರಂಗಭೂಮಿ, ಮಹಿಳೆಯರನ್ನು ಪ್ರತಿನಿಧಿಸುವ ವಿಧಾನದಲ್ಲಿ ಗಣನೀಯ ಬದಲಾವಣೆಗಳನ್ನು ಕಂಡಿದೆ. ಈ ಲೇಖನವು ಹಲವು ಆಯಾಮದ ವಿಶ್ಲೇಷಣೆಯನ್ನು ಬಳಸಿದೆ. ರಂಗಭೂಮಿಯ ವೇದಿಕೆಯ ಮೇಲೆ ಮಹಿಳೆಯರ ಚಿತ್ರಣವನ್ನು ಪ್ರಭಾವಿಸಿದ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳನ್ನು ಚರ್ಚಿಸುತ್ತದೆ.

ಈ ಅಧ್ಯಯನವು ಚಾರಿತ್ರಿಕ ಅವಲೋಕನದೊಂದಿಗೆ ಪ್ರಾರಂಭವಾಗುತ್ತದೆ, ಸಾಂಪ್ರದಾಯಿಕ ಮತ್ತು ಆಧುನಿಕವಾಗಿ ಬದಲಾವಣೆಗೊಂಡ ಪಾತ್ರಗಳಿಂದ ನಿರೂಪಿಸಲ್ಪಟ್ಟ ಆರಂಭಿಕ ಕನ್ನಡ ರಂಗಭೂಮಿಯಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಪತ್ತೆಹಚ್ಚುತ್ತದೆ. ರಂಗಭೂಮಿಯಲ್ಲಿ ಹಲವಾರು ರೂಪಾಂತರಗಳು ಮುಂದುವರಿದಂತೆ, ಬದಲಾಗುತ್ತಿರುವ ಕರ್ನಾಟಕದಲ್ಲಿ ಸಾಮಾಜಿಕ ಕಟ್ಟುಪಾಡುಗಳು, ಸಂಪ್ರದಾಯಗಳನ್ನು ಮೀರಿ ಮಹಿಳೆಯರು ಪ್ರಗತಿಪಥದತ್ತ ಸಾಗುತ್ತಿರುವುದು ಗಮನಾರ್ಹ ಅಂಶವಾಗಿದೆ. ಈ ಅಧ್ಯಯನವು ವಿವಿಧ ದಶಕಗಳಲ್ಲಿ ಪ್ರಮುಖ ರಂಗಭೂಮಿಯಲ್ಲಿನ ನಿರೂಪಣೆಗಳು, ಪಾತ್ರ ಅಭಿವೃದ್ಧಿ ಮತ್ತು ಮಹಿಳೆಯರ ಚಿತ್ರಣವನ್ನು ಪರಿಶೀಲಿಸುತ್ತದೆ, ಸೂಕ್ಷ್ಮ , ಸ್ವತಂತ್ರ ಮತ್ತು ಸಬಲೀಕರಣಗೊಂಡ ಮಹಿಳಾ ಪಾತ್ರಗಳ ಹೊರಹೊಮ್ಮುವಿಕೆಯನ್ನು ವಿಶ್ಲೇಷಿಸುತ್ತದೆ.

ಇದಲ್ಲದೆ, ಕನ್ನಡ ರಂಗಭೂಮಿಯ ಭೌಗೋಳಿಕತೆಯನ್ನು ಮರುರೂಪಿಸುವಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ ಪ್ರಭಾವಿ ಮಹಿಳಾ ನಟಿಯರು, ಮತ್ತು ಬರಹಗಾರರ ಪ್ರಭಾವವನ್ನು ವಿಶ್ಲೇಷಣೆಯು ಪರಿಶೀಲಿಸುತ್ತದೆ. ಇತ್ತೀಚಿನ ಕನ್ನಡ ರಂಗಭೂಮಿಯಲ್ಲಿ ಮಹಿಳೆಯರ ಚಿತ್ರಣದ ಮೇಲೆ ಜಾಗತೀಕರಣ ಮತ್ತು ಸಮಕಾಲೀನ ಸಾಮಾಜಿಕ ಮತ್ತು ರಾಜಕೀಯ ಚಳುವಳಿಗಳ ಪ್ರಭಾವವನ್ನು ಸಹ ಇದು ಒಳಗೊಂಡಿದೆ.

ಕನ್ನಡ ರಂಗಭೂಮಿಯಲ್ಲಿ ಮಹಿಳಾ ಪಾತ್ರಗಳ ರೂಪಾಂತರವನ್ನು ವಿಮರ್ಶಾತ್ಮಕವಾಗಿ

* **ಅನುರಾಧ ವಿ.,** ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿ, ಲಲಿತಕಲೆಗಳ ನಿಕಾಯ, ಸಂಗೀತ ಮತ್ತು ನೃತ್ಯ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

** **ಡಾ. ಜ್ಯೋತಿಲಕ್ಷ್ಮೀ ಡಿ.ಪಿ.,** ಸಹಾಯಕ ಪ್ರಾಧ್ಯಾಪಕರು, ಸಂಗೀತ ವಿಭಾಗ, ಜೆ.ಎಂ.ಎ.ಎಸ್. ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ಹುಬ್ಬಳ್ಳಿ.

ನಿರ್ಣಯಿಸುವ ಮೂಲಕ, ಈ ಅಧ್ಯಯನವು ಕನ್ನಡ ರಂಗಭೂಮಿ ಸಾಮಾಜಿಕ ಮನೋಭಾವಗಳನ್ನು ಹೇಗೆ ಪ್ರತಿಬಿಂಬಿಸುತ್ತದೆ ಎಂಬುದರ ಕುರಿತು ವಿಶಾಲವಾದ ತಿಳುವಳಿಕೆಗೆ ಕೊಡುಗೆಯನ್ನು ಕೊಡುತ್ತದೆ. ಇದು ರಂಗಭೂಮಿಯಲ್ಲಿ ಮಹಿಳೆಯರ ಹೆಚ್ಚು ಅಂತರ್ಗತ ಮತ್ತು ವೈವಿಧ್ಯಮಯ ಪ್ರಾತಿನಿಧ್ಯದ ಅಗತ್ಯವನ್ನು ಒತ್ತಿ ಹೇಳುತ್ತದೆ ಅಲ್ಲದೆ ಮಹಿಳೆಯರು ರಂಗಭೂಮಿಯಲ್ಲಿ ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳನ್ನು ಕುರಿತು ಬೆಳಕು ಚೆಲ್ಲುತ್ತದೆ.

**KEYWORDS:** ಕನ್ನಡ ರಂಗಭೂಮಿಯಲ್ಲಿ ಮಹಿಳೆಯರು, ಲಿಂಗ ಪ್ರಾತಿನಿಧ್ಯ, ನಾಟಕದಲ್ಲಿ ಸ್ತ್ರೀವಾದ, ಸಾಮಾಜಿಕ–ಸಾಂಸ್ಕೃತಿಕ ಪರಿವರ್ತನೆ, ಲಿಂಗ ಸಮಾನತೆ, ಸಾಮಾಜಿಕ ಪ್ರತಿಬಿಂಬಗಳು.

---

## ಪ್ರಸ್ತಾವನೆ:

ಭಾರತೀಯ ರಂಗಭೂಮಿಯ ಒಂದು ಪ್ರಭಾವಶಾಲಿ ಶಾಖೆಯಾಗಿರುವ ಕನ್ನಡ ರಂಗಭೂಮಿಯು ಕರ್ನಾಟಕದಲ್ಲಿ ಬದಲಾಗುತ್ತಿರುವ ಸಾಮಾಜಿಕ–ಸಾಂಸ್ಕೃತಿಕ ಭೂದೃಶ್ಯವನ್ನು ಹೊಂದಿದೆ. ಈ ವಿಮರ್ಶಾತ್ಮಕ ಅಧ್ಯಯನವು ಕನ್ನಡ ರಂಗಭೂಮಿಯಲ್ಲಿ ಮಹಿಳೆಯರ ಬಹುಮುಖ ಪ್ರತಿಭೆ ಮತ್ತು ಅವರ ಪಾತ್ರವನ್ನು ಚರ್ಚಿಸುತ್ತದೆ. ಕಾಲಾನಂತರದಲ್ಲಿ ಅವರ ಪ್ರಾತಿನಿಧ್ಯಗಳ ಕ್ರಿಯಾತ್ಮಕ ವಿಕಾಸವನ್ನು ವಿಶ್ಲೇಷಿಸುತ್ತದೆ. ಕನ್ನಡ ರಂಗಭೂಮಿಯಲ್ಲಿ ಮಹಿಳೆಯರ ಚಿತ್ರಣವು ಕೇವಲ ಪ್ರತಿಬಿಂಬ ಮಾತ್ರವಲ್ಲದೆ ಸಾಮಾಜಿಕ ಗ್ರಹಿಕೆಗಳು ಮತ್ತು ರೂಢಿಗಳನ್ನು ತಿಳಿಸುವ ಪ್ರಬಲ ಮಾಧ್ಯಮವೂ ಹೌದು. ಕನ್ನಡ ರಂಗಭೂಮಿಯು ಬೆಳವಣಿಗೆಯನ್ನು ಹೊಂದಿದಂತೆ ಅದರಲ್ಲಿ ಮಹಿಳೆಯರ ಪಾತ್ರಗಳು ಮತ್ತು ಚಿತ್ರಣಗಳು ಕೂಡ ಬೆಳವಣಿಗೆ ಹೊಂದಿರುವುದನ್ನು ಕಾಣುತ್ತೇವೆ.

ಈ ಸಂಶೋಧನೆಯು ಕನ್ನಡ ರಂಗಭೂಮಿಯ ಇತಿಹಾಸದ ಮೂಲಕ ಪ್ರಯಾಣವನ್ನು ಪ್ರಾರಂಭಿಸುತ್ತದೆ, ಮಹಿಳೆಯರ ಸಾಂಪ್ರದಾಯಿಕ ಮತ್ತು ಆಧುನಿಕತೆಯ ಬದಲಾವಣೆಗಳೊಂದಿಗೆ ನಿರೂಪಿಸಲ್ಪಟ್ಟ ಅದರ ಆರಂಭಿಕ ದಿನಗಳನ್ನು ವಿವರಿಸುತ್ತದೆ. ನಂತರ ಇದು ಕರ್ನಾಟಕದಲ್ಲಿ ಬದಲಾಗುತ್ತಿರುವ ಸಾಮಾಜಿಕ–ರಾಜಕೀಯ ಪರಿಸರಕ್ಕೆ ಹೊಂದಿಕೆಯಾಗುವ ಮಹಿಳಾ ಪಾತ್ರಗಳ ಕ್ರಮೇಣ, ಆದರೆ ಮಹತ್ವದ ಬದಲಾವಣೆಗಳನ್ನು ಮಾಡುತ್ತದೆ. ನಿರೂಪಣಾ ರಚನೆಗಳು, ಪಾತ್ರ ಅಭಿವೃದ್ಧಿ ಮತ್ತು ಪ್ರಮುಖ ನಾಟಕಗಳ ನಟಿಯರ ಮೂಲಕ, ಈ ಅಧ್ಯಯನವು ರಂಗಭೂಮಿ ಮತ್ತು ಸಮಾಜದ ನಡುವಿನ ಸಂಕೀರ್ಣವಾದ ಪರಸ್ಪರ ಕ್ರಿಯೆಯನ್ನು ತೆರೆದಿಡಲು ಯತ್ನಿಸುತ್ತದೆ. ಇದಲ್ಲದೆ, ಇದು ಇತ್ತೀಚಿನ ಕನ್ನಡ ರಂಗಭೂಮಿಯಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ರೂಪಿಸುವಲ್ಲಿ ಜಾಗತೀಕರಣ ಮತ್ತು ಸಮಕಾಲೀನ ಸ್ತ್ರೀವಾದಿ ಚಳುವಳಿಗಳ ಪ್ರಭಾವವನ್ನು ನಿರ್ಣಯಿಸುತ್ತದೆ. ಹಾಗೆ ಮಾಡುವುದರ ಮೂಲಕ, ಕರ್ನಾಟಕದಲ್ಲಿ ಮಹಿಳೆಯರ ವಿಕಸನಗೊಳ್ಳುತ್ತಿರುವ ಸ್ಥಿತಿಯನ್ನು ಪ್ರತಿಬಿಂಬಿಸುವ ಮತ್ತು ಪ್ರಭಾವಿಸುವಲ್ಲಿ ಕನ್ನಡ ರಂಗಭೂಮಿಯ ಪ್ರಮುಖ ಪಾತ್ರದ ಮೇಲೆ ಬೆಳಕು ಚೆಲ್ಲುವ ಉದ್ದೇಶವನ್ನು ಅಧ್ಯಯನವು ಹೊಂದಿದೆ.

ರಂಗಭೂಮಿಯಲ್ಲಿ ಮಹಿಳೆ ಪುರುಷನಿಗೆ ಸರಿಸಾಟಿ ಎಂದು ಹೇಳಿದರೆ ಹಲವರಿಗೆ ಆಶ್ಚರ್ಯವಾಗಬಹುದು. ಪುರುಷ ಪ್ರಧಾನ ಸಮಾಜದಲ್ಲಿ ಇದು ಹೇಗೆ ಸಾಧ್ಯ ಎಂದು

ಪ್ರಶ್ನಿಸಿಕೊಂಡರೆ ಪುರುಷರಿಗಿಂತ ನಾವೇನು ಕಡಿಮೆ ಇಲ್ಲ ಎಂದು ಸವಾಲೆಸೆದು ಪುರುಷರಿಗಿಂತ ಮಿಗಿಲಾದ ಸಾಧನೆ ಮಾಡಿದವರೂ ಕನ್ನಡ ರಂಗಭೂಮಿ ಕ್ಷೇತ್ರದಲ್ಲಿ ಇರುವುದು ಸತ್ಯವೇ ಆಗಿದೆ.

ಸಂಘ ಸಂಸ್ಥೆಗಳು, ಹವ್ಯಾಸಿ ರಂಗ ತಂಡಗಳು ನಾಟಕ ಮಾಡಲೆಂದು ಸಿದ್ಧವಾಗುವ ಸಂದರ್ಭದಲ್ಲಿ ಎದುರಾಗುವ ಹಲವು ತೊಡಕುಗಳಲ್ಲಿ ಕಲಾವಿದೆಯರು ಸಿಗುವುದಿಲ್ಲ ಎಂಬ ಸಮಸ್ಯೆ ಇದ್ದ ಕಾಲದಲ್ಲಿ ಮಹಿಳೆಯರ ಪಾತ್ರವನ್ನು ಅದ್ಭುತವಾಗಿ ಅಭಿನಯಿಸಿದ ಪುರುಷರ ದೊಡ್ಡ ಪಟ್ಟಿಯೇ ಇದೆ. ಸ್ತ್ರೀ ಪಾತ್ರಗಳನ್ನು ರಂಗಭೂಮಿಯಲ್ಲಿ ಅದರಲ್ಲೂ ಜನಪದ ರಂಗಭೂಮಿಯಲ್ಲಿಯೂ ಪುರುಷ ಕಲಾವಿದರೇ ಸ್ತ್ರೀಪಾತ್ರಗಳನ್ನು ಅಭಿನಯಿಸುತ್ತಿದ್ದುದು ಉಂಟು. ಕೆಲವು ನಾಟಕಕಾರರು ಮಹಿಳೆಯರ ಪಾತ್ರವೇ ಇಲ್ಲದ ನಾಟಕಗಳನ್ನು ಬರೆದಿದ್ದಾರೆ. 140 ವರ್ಷಗಳ ಇತಿಹಾಸವಿರುವ ವೃತ್ತಿ ರಂಗಭೂಮಿಯಲ್ಲಿ ಮಹಿಳೆಯರು ಆರಂಭದ ಒಂದೆರಡು ದಶಕಗಳಲ್ಲಿ ರಂಗ ಪ್ರವೇಶಿಸಿರಲಿಲ್ಲ. ಸ್ತ್ರೀಯರ ನಯ, ನಾಜೂಕಿನ ಹಾವ ಭಾವಗಳಿಗೆ ಸಹಜತೆ ಬರಬೇಕಾದರೆ ಸ್ತ್ರೀಯೇ ಅಭಿನಯಿಸಬೇಕು ಎಂಬ ತೀರ್ಮಾನಕ್ಕೆ ಬಂದ ಕೋಣ್ಣೂರು ನಾಟಕ ಕಂಪನಿಯ ಶಿವಮೂರ್ತಿ ಸ್ವಾಮಿಗಳು 1901 ರಲ್ಲಿಯೇ ಗುಳೇದಗುಡ್ಡದಿಂದ “ಯಲ್ಲೂ ಬಾಯಿ” ಎಂಬ ಮಹಿಳೆಯನ್ನು ಕರೆಸಿ ಆಕೆಯಿಂದ ಮಹಿಳೆಯ ಪಾತ್ರ ಮಾಡಿಸುತ್ತಾರೆ. ಗಾಯನ ಮತ್ತು ಅಭಿನಯದಲ್ಲಿ ತನ್ನ ಅದ್ವಿತೀಯ ಅಭಿನಯವನ್ನು ಮಾಡಿದ ಯಲ್ಲೂ ಬಾಯಿ ಅವರೇ ಕನ್ನಡ ರಂಗಭೂಮಿಯ ಮೊದಲ ನಟಿ ಎಂದರೆ ತಪ್ಪಾಗಲಾರದು. 1898ರಲ್ಲಿ ಪಾಪಸಾನಿ ಎಂಬಾಕೆ ಸ್ಥಾಪಿಸಿದ ಸ್ತ್ರೀ ನಾಟಕ ಮಂಡಳಿ “ಪ್ರಭಾವತಿ ದರ್ಬಾರು”, ‘ಹರಿಶ್ಚಂದ್ರ’ ಮುಂತಾದ ನಾಟಕ ಪ್ರದರ್ಶಿಸುತ್ತಿತ್ತೆಂದೂ ಹಾಗಾಗಿ ಇದೇ ಮೊದಲ ನಾಟಕ ಮಂಡಳಿ ಎಂದೂ ಹೇಳಲಾಗುತ್ತದೆ. 1908ರಲ್ಲಿ ಲಕ್ಷ್ಮೇಶ್ವರದ ಬಚ್ಚಸಾನಿ ಸ್ಥಾಪಿಸಿದ ಮಹಿಳಾ ನಾಟಕ ಮಂಡಳಿಯಲ್ಲಿ ಪುರುಷ ಪಾತ್ರ ಸೇರಿದಂತೆ ಎಲ್ಲಾ ಪಾತ್ರಗಳನ್ನೂ ಮಹಿಳೆಯರೇ ಅಭಿನಯಿಸುತ್ತಿದ್ದರು. ಇದು ಬರೀ ಮಹಿಳೆಯರೇ ಅಭಿನಯಿಸುವ ಇಂತಹ ಸಂಪ್ರದಾಯ ಹಾಕಿಕೊಟ್ಟ ಮೊದಲ ಮಹಿಳಾ ನಾಟಕ ತಂಡ ಎಂದು ಹೆಗ್ಗಳಿಕೆಗೆ ಪಾತ್ರವಾಗಿದೆ. ಆ ನಂತರದಲ್ಲಿ ಕರ್ನಾಟಕದಲ್ಲಿ ಸ್ತ್ರೀ ನಾಟಕ ಮಂಡಳಿಗಳು ಉದಯಿಸಿದವು. ಲಕ್ಷ್ಮಸಾನಿಯವರ ನಾಟಕ ಮಂಡಳಿಗಳಿದ್ದವು. ಮುಂದೆ ಮೈಸೂರಿನ ಅಂಬುಜಮ್ಮ ಎನ್ನುವವರು ‘ಶ್ರೀ ಸ್ತ್ರೀ ನಾಟಕ ಮಂಡಳಿ’ ಸ್ಥಾಪಿಸುತ್ತಾರೆ. ನಂತರದ ಪ್ರಮುಖ ಸ್ತ್ರೀಯರ ನಾಟಕ ಕಂಪನಿಗಳೆಂದರೆ ಮೈಸೂರು ಭಾಗದಲ್ಲಿ ಜಿ.ಕೆ.ಅಯ್ಯಂಗಾರರ ‘ಗಾಯತ್ರಿ ಸ್ತ್ರೀ ನಾಟಕ ಮಂಡಳಿ’, ಜಿ.ಬಿ.ಮಲ್ಲಪ್ಪನವರ ‘ಅಕ್ಕಮಹಾದೇವಿ ಕೃಪಾಪೋಷಿತ ನಾಟಕ ಸಭಾ’, ಉತ್ತರ ಕರ್ನಾಟಕದಲ್ಲಿ ಸೋನೂಬಾಯಿ ದೊಡ್ಡಮನಿಯವರ ‘ನೂತನ ಸಂಗೀತ ನಾಟಕ ಮಂಡಳಿ’ ಮುಂತಾದವು. ಕುಕನೂರು ರೆಹಿಮಾನವ್ವನವರು 1950ರಲ್ಲಿ ಸ್ಥಾಪಿಸಿದ ‘ಶ್ರೀ ಲಲಿತ ಕಲಾ ನಾಟ್ಯ ಸಂಘ’ ಸುಮಾರು 25 ವರ್ಷಗಳ ಕಾಲ ನಡೆಸುತ್ತಾರೆ. ಮೈಸೂರು ಮಹಾರಾಜರು ಸ್ಥಾಪಿಸಿದ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾವನ್ನು ಮುಂದೆ ಮಳವಳ್ಳಿ ಸುಂದರಮ್ಮನವರು ದೀರ್ಘ ಕಾಲ ನಡೆಸುತ್ತಾರೆ. ಜುಬೇದಾ ಬಾಯಿ ಸವಣೂರರ “ಜಯ ಕನ್ನಡ ಕಲಾ ಸಂಘ”, ಕುಂದಾಪುರ ಸುಮಿತ್ರಾರ ಮಹಿಳಾ ತಂಡ, ಬೆಂಗಳೂರಿನಲ್ಲಿ ಆರು ಮಂದಿ ಅಕ್ಕ ತಂಗಿಯರು ಸೇರಿ ಸ್ಥಾಪಿಸಿದ “ಸರಸ್ವತಿ ನಾಟಕ ಮಂಡಳಿ”, ಆರ್. ನಾಗರತ್ನಮ್ಮನವರ “ಸ್ತ್ರೀ ನಾಟಕ ಮಂಡಳಿ”, ಬಳ್ಳಾರಿ ಲಲಿತಮ್ಮನವರ ಕಂಪೆನಿ, ಇಳಕಲ್, ಮರಿಯಮ್ಮನಹಳ್ಳಿ, ಗದಗ, ಹುಬ್ಬಳ್ಳಿ, ದಾವಣಗೆರೆ, ಹಂಸನೂರು ನಟಿಯರು ಸ್ಥಾಪಿಸಿದ ತಂಡಗಳೂ ಸೇರಿದಂತೆ ಮಹಿಳೆಯರೇ ನಾಟಕ ತಂಡಗಳನ್ನು ಸುದೀರ್ಘ ಕಾಲ ನಡೆಸಿದ

ದೊಡ್ಡ ಚರಿತ್ರೆಯೇ ಇದೆ.

ಇಲ್ಲಿ ಹೆಸರಿಸಿರುವುದು ಕೆಲವು ಮಾತ್ರ. ವೃತ್ತಿರಂಗಭೂಮಿ ಪರಿಭಾಷೆಯಲ್ಲಿ ಬಹಳ ದೊಡ್ಡ ಕಲಾವಿದರನ್ನು "ದಂತ ಕತೆ" ಎಂದು ಕರೆಯುವುದು ವಾಡಿಕೆ. ಸುಂದರಮ್ಮ, ಸ್ವರ್ಣಮ್ಮ, ಮೋಹನ್ ಕುಮಾರಿ, ಸೋಹನ್ ಕುಮಾರಿ, ಲಕ್ಷ್ಮಿ ಬಾಯಿ, ಬಿ.ಜಯಮ್ಮ, ಆದವಾನಿ ಲಕ್ಷ್ಮಿದೇವಿ, ಏಣಗಿ ಲಕ್ಷ್ಮಿ ಬಾಯಿ ಮುಂತಾದವರು. ಅಮೀರ್ ಜಾನ್, ಗೋಹರಜಾನ್ ಕರ್ನಾಟಕಿಯವರಂತೂ ರಾಷ್ಟ್ರಮಟ್ಟದಲ್ಲಿ ದೊಡ್ಡ ಹೆಸರು ಮಾಡಿದವರು. ಇವರು ನಟಿ ಅಷ್ಟೇ ಅಲ್ಲದೆ ಸಂಘಟಕಿಯರು (ಮಾಲೀಕರು), ನೇಪಥ್ಯ ಕರ್ಮಿಗಳು, ನಿರ್ದೇಶಕರೂ ಆಗಿದ್ದರು. ಇವರೆಲ್ಲರೂ ಜಾತಿ ಮತಭೇದಗಳಿಲ್ಲದೆ ನಾಟಕ ರಂಗಕ್ಕೆ ತಮ್ಮ ಸೇವೆ ಸಲ್ಲಿಸಿದ್ದಾರೆ. ಈ ಎಲ್ಲಾ ಮಹಿಳೆಯರು ರಂಗಭೂಮಿಯಲ್ಲಿ ಹಿರಿದಾದ ಪಾತ್ರವನ್ನು ನಿರ್ವಹಿಸಿದ್ದಾರೆ. ಆರಂಭದ ದಿನಗಳಲ್ಲಿ ನಾಟಕಗಳಲ್ಲಿ ಹೆಣ್ಣಿನ ಪಾತ್ರಗಳನ್ನೂ ಗಂಡಸರೇ ಅಭಿನಯಿಸುತ್ತಿದ್ದರು. ಆದರೆ ಕಾಲ ಬದಲಾದಂತೆ ಮಹಿಳೆಯರು ರಂಗಭೂಮಿಗೆ ಆಗಮಿಸಿ ತಮ್ಮ ನಟನೆ, ನಿರ್ದೇಶನ ಹಾಗೂ ತಂತ್ರಜ್ಞಾನದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಮಹಿಳೆಯರು ರಂಗಭೂಮಿಗೆ ಪಾದಾರ್ಪಣೆ ಮಾಡಲು ಅವರು ಮೊದಲು ಹೊಟ್ಟೆ ಪಾಡಿಗಾಗಿ ಬಂದಿದ್ದಾರೆ. ನಂತರ ಸಾಮಾಜಿಕ ಹೋರಾಟದ ಬಳಿಕ ಮಹಿಳೆಯರು ನೇರವಾಗಿ ರಂಗಭೂಮಿಗೆ ಬಂದರು. ಅವರು ಧೈರ್ಯದಿಂದ ನಾಟಕಗಳಲ್ಲಿ ನಟನೆಯನ್ನು ಪ್ರಾರಂಭಿಸಿ ಸಮಾಜದಲ್ಲಿ ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡಿದ್ದ ಪುರುಷ ಪ್ರಧಾನ ಸಮಾಜದ ಮುಖವಾಡವನ್ನು ಕಳಚಿಡಲು ಧ್ವನಿಯಾದರು. ರಂಗಭೂಮಿಯ ನಿರ್ದೇಶನ ಮತ್ತು ಲೇಖನದಲ್ಲೂ ತಮ್ಮ ಪ್ರತಿಭೆಯನ್ನು ತೋರಿದ್ದಾರೆ. ಸಂಗೀತ, ನೃತ್ಯ, ವಾದ್ಯ ಮುಂತಾದ ಶಾಖೆಗಳಲ್ಲಿ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಜೊತೆಗೆ ಅವರು ಕುಟುಂಬ ಮತ್ತು ಸಮಾಜದ ವಿರೋಧವನ್ನು ಎದುರಿಸಬೇಕಾಯಿತು. ಅವರು ರಂಗತಂಡಗಳಲ್ಲಿ ಕಲಾವಿದೆಯರ ಕೊರತೆಯನ್ನು ನೀಗಿಸುವ ಕಾರ್ಯವನ್ನು ಮಾಡಿ ಸಮಾಜದಲ್ಲಿ ಸಮಾನತೆಯ ಕಡೆಗೆ ಹೆಜ್ಜೆಯನ್ನಿಟ್ಟಿದ್ದಾರೆ. ಅವರಿಗೆ ಆರ್ಥಿಕ ಭದ್ರತೆ ಹಾಗೂ ಸೂಕ್ತ ಅವಕಾಶಗಳ ಕೊರತೆ ಇತ್ತು.

**ಸಾಹಿತ್ಯ ವಿಮರ್ಶೆ:**

ಸಿಂಧುವಳ್ಳಿ ಅನಂತಮೂರ್ತಿ, ಎಚ್.ಕೆ. ರಾಮನಾಥ್, (1984) ಅವರು ಕರ್ನಾಟಕ ರಂಗಭೂಮಿ –ನೆನ್ನೆ ಇಂದು ನಾಳೆ ಎಂಬ ಕೃತಿಯನ್ನು ಸಂಪಾದಿಸಿದ್ದಾರೆ. ಈ ಕೃತಿಯಲ್ಲಿ ವಿವಿಧ ಪ್ರಖ್ಯಾತ ಲೇಖಕರು ವಿಶಿಷ್ಟ ಲೇಖನಗಳನ್ನು ರಚಿಸಿದ್ದಾರೆ. ವೃತ್ತಿರಂಗಭೂಮಿ ಸ್ಥಿತಿಗತಿ, ಹಳೇ ಮೈಸೂರಿನ ವೃತ್ತಿ ರಂಗಭೂಮಿ, ಉತ್ತರ ಕರ್ನಾಟಕದ ವೃತ್ತಿರಂಗಭೂಮಿ, ವೃತ್ತಿರಂಗಭೂಮಿಯ ಪ್ರೇಕ್ಷಕ ವರ್ಗದ ಕುರಿತು ಒಂದನೇ ಭಾಗದಲ್ಲಿ ವಿವರಿಸಿದ್ದು, ಎರಡನೆಯ ಭಾಗದಲ್ಲಿ ಗುಬ್ಬಿ ಕಂಪನಿಯ ಇತಿಹಾಸ ಮತ್ತು ಅದರ ಕೊಡುಗೆಯನ್ನು ಚರ್ಚಿಸಿದ್ದಾರೆ. ಗುಬ್ಬಿ ಕಂಪನಿಯ ಹುಟ್ಟು ಬೆಳವಣಿಗೆ, ಗುಬ್ಬಿ ಕಂಪನಿಯ ನಾಟಕಗಳು, ಕಂಪನಿಯ ನಟ, ನಟಿಯರು, ಕಂಪನಿಯ ವೈಶಿಷ್ಟ್ಯ ಮತ್ತು ಕೊಡುಗೆಯನ್ನು ವಿವರಿಸಿದ್ದಾರೆ. ಮೂರನೆಯ ಭಾಗದಲ್ಲಿ ಕರ್ನಾಟಕ ರಂಗಭೂಮಿ ಇಂದು ಮತ್ತು ನಾಳೆ ಎಂಬ ಶೀರ್ಷಿಕೆಯ ಅಡಿಯಲ್ಲಿ ಕನ್ನಡ ರಂಗಭೂಮಿ ಇಂದು, ನಾಳಿನ ರಂಗಭೂಮಿಯ ಕುರಿತು ಚರ್ಚೆ ನಡೆಸಿದ್ದಾರೆ.

ದಳವಾಯಿ ವೆಂಕಟಗಿರಿ ಅವರು (2000) ಕನ್ನಡ ರಂಗಭೂಮಿ ಮತ್ತು ಮಹಿಳೆ (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ) ಎಂಬ ಪಿಎಚ್.ಡಿ ಮಹಾಪ್ರಬಂಧವನ್ನು ಗುಲಬರ್ಗ

ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಅವರು ತಮ್ಮ ಅಧ್ಯಯನದಲ್ಲಿ ಕಲಾ ಪರಂಪರೆ ಮತ್ತು ಮಹಿಳೆ, ಜಾನಪದ ರಂಗಭೂಮಿ ಮತ್ತು ಮಹಿಳೆ ಹಾಗೂ ಹವ್ಯಾಸಿ ರಂಗಭೂಮಿ ಮತ್ತು ಮಹಿಳೆ ಹಾಗೂ ತೌಲನಿಕ ನೋಟ ಎಂಬ ಅಧ್ಯಾಯಗಳನ್ನು ವಿಂಗಡಿಸಿಕೊಂಡಿದ್ದು, ಅದರಲ್ಲಿ ನಟಿಯರ ಜೀವನ ಸಾಧನೆಯನ್ನು ಚರ್ಚಿಸಿದ್ದಾರೆ. ಜೀವನದುದ್ದಕ್ಕೂ ಕಲಾವಿದೆಯರು ಅಲೆಮಾರಿಗಳಾಗಿಯೇ ಬದುಕಿದ್ದು, ಅವರು ಸರ್ಕಾರದಿಂದಲೂ ಸರಿಯಾಗಿ ಗುರುತಿಸಲ್ಪಟ್ಟಿಲ್ಲ. ಹವ್ಯಾಸಿ ಮತ್ತು ವೃತ್ತಿ ರಂಗಕಲಾವಿದೆಯರು ಅನುಭವಿಸುವ ಅನೇಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಹೆಣ್ಣಿನ ಬಗ್ಗೆ ಅಂದಿಗೂ ಇಂದಿಗೂ ಎಂದೆಂದಿಗೂ ಅನುಮಾನಗಳನ್ನೇ ಇಟ್ಟುಕೊಂಡು ಮುಂದುವರೆದಿರುವ ಸಮಾಜದಲ್ಲಿ ಗರುಡ ಸದಾಶಿವರಂತಹ ಕಲಾಪೋಷಕರು ಮಹಿಳೆಗೆ ಅವಕಾಶ ಮಾಡಿಕೊಟ್ಟಿದ್ದಲ್ಲದೆ, ತಮ್ಮ ಮನೆಯ ಹೆಣ್ಣು ಮಕ್ಕಳನ್ನು ರಂಗಭೂಮಿಗೆ ಪರಿಚಯಿಸಿದ್ದನ್ನು ಗುರುತಿಸಿದ್ದಾರೆ.

ಎಚ್.ಎಲ್.ಪುಷ್ಪ ಅವರು (2015) ರಂಗಭೂಮಿ ಮತ್ತು ಮಹಿಳೆ ಎಂಬ ಕೃತಿಯನ್ನು ಸಂಪಾದಿಸಿದ್ದಾರೆ. ಇದನ್ನು ಕರ್ನಾಟಕ ನಾಟಕ ಅಕಾಡೆಮಿಯು ಪ್ರಕಟಿಸಿದೆ. ಈ ಕೃತಿಯಲ್ಲಿ ಮಹಿಳೆ ಮತ್ತು ರಂಗಭೂಮಿಯೊಂದಿಗಿನ ನಿರ್ದಿಷ್ಟವಾದ ಸಂಬಂಧವನ್ನು ಚಾರಿತ್ರಿಕವಾಗಿ ಗುರುತಿಸುವ ಹಂತದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯು ಪ್ರಕಟಿಸಿದೆ. ಇಲ್ಲಿನ ಲೇಖನಗಳು ಇದುವರೆಗಿನ ನಡೆದಿರುವ ಮಹಿಳೆಯೇ ಕೇಂದ್ರವಾದ ರಂಗಚಟುವಟಿಕೆಗಳನ್ನು ದಾಖಲಿಸುವ ಪ್ರಯತ್ನ ಮಾಡಿವೆ. ಈ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡ ಲೇಖಕ ಹಾಗೂ ಲೇಖಕಿಯರು, ನಟಿ, ನಿರ್ದೇಶಕಿಯರು ಇಲ್ಲಿ ಲೇಖನಗಳನ್ನು ಬರೆದಿದ್ದಾರೆ. ಇಲ್ಲಿ ತಮ್ಮ ಪಾಡಿಗೆ ತಾವು ಹರಿಯುತ್ತಿರುವ ತೊರೆಗಳನ್ನು ಅವುಗಳ ಹರಿಯುವಿಕೆಯನ್ನು ನಿರ್ದಿಷ್ಟವಾದ ನಡೆಗೆ ಸೇರಿಸುವ ಪ್ರಯತ್ನವಿದೆ.

ಶೈಲಜಾ ಹಿರೇಮಠ (1999) ಅವರ ಪಾತರದವರು ಎಂಬ ಕೃತಿಯಲ್ಲಿ ಪುರುಷ ಪ್ರಧಾನ ಸಂಸ್ಕೃತಿಯು ಸ್ತ್ರೀಯನ್ನು ಕಂಡ ರೀತಿ, ನಿರ್ವಚಿಸಿದ ಬಗೆ ಅನನ್ಯವಾಗಿದೆ. ಸ್ತ್ರೀಗೆ ನೋವನ್ನು ಸಹಿಸಿಕೊಳ್ಳುವ ಶಕ್ತಿ ಇದೆ. ಅವಳು ಧರಣಿ, ಮೃದು ಸ್ವಭಾವದವಳು, ಮುಂತಾಗಿ ಹೇಳಲಾಗಿದೆ. ಮಹಿಳೆಯನ್ನು ಹಲವಾರು ಧರ್ಮ, ಜಾತಿ, ಉಪಜಾತಿಗಳ ನೆಲೆಯಲ್ಲಿ ಶೋಷಣೆ ಮಾಡಲಾಗಿದೆ. ಪಿತೃಪ್ರಧಾನ ಘಟ್ಟದಲ್ಲಿ ಕಾಣಿಸಿಕೊಂಡ ಲೈಂಗಿಕ ಪಾವಿತ್ರ್ಯತೆ ಮತ್ತು ನಿಷ್ಠೆ, ಸ್ತ್ರೀಯರ ಮೇಲೆ ಮಾತ್ರ ಹೇರಲ್ಪಟ್ಟಿತು. ಲಿಂಗ ತಾರತಮ್ಯದ ಹಿನ್ನೆಲೆಯಲ್ಲಿ ರೂಪ ಪಡೆದ ಲೈಂಗಿಕ ಶೋಷಣೆ ಮಾನವ ಚರಿತ್ರೆಯಲ್ಲಿ ಕಾಣಿಸಿಕೊಂಡ ಶೋಷಣೆಯಾಗಿದೆ. ಕಾಮದ ನೆಲೆಯಲ್ಲಿ ಹೆಣ್ಣಿನ ಜೈವಿಕತೆಯನ್ನೇ ಪ್ರಧಾನವಾಗಿಟ್ಟುಕೊಂಡು ನಿರ್ವಹಿಸಿದ ಪುರುಷನ ನಿರ್ವಚನವನ್ನು ಬೌದ್ಧಿಕ ನೆಲೆಯಲ್ಲಿ ಚರ್ಚಿಸಿದ್ದಾರೆ.

ಶಿವಾನಂದ ಎಸ್.ವಿರಕ್ತಮಠ, (2018) ಮಹಿಳೆ ಮತ್ತು ಧರ್ಮ ಎಂಬ ಕೃತಿಯಲ್ಲಿ ಸಾಮಾಜಿಕ ಸಂಸ್ಥೆಯಾಗಿ ಧರ್ಮವನ್ನು ನೋಡುವ ಪರಿಕಲ್ಪನೆಯನ್ನು ಲೇಖಕರು ಹೊಂದಿದ್ದಾರೆ. ಇದರಲ್ಲಿ ಸಾಮಾಜಿಕ ಸಂಸ್ಥೆಗಳ ಸ್ವರೂಪ ಮತ್ತು ನಿರ್ವಚನ, ಗುಣಲಕ್ಷಣಗಳು, ಕಾರ್ಯವಿಧಾನಗಳು, ನಿರ್ದೇಶಕ ಸ್ಥಾನದಲ್ಲಿ ಧಾರ್ಮಿಕ ಸಂಸ್ಥೆಗಳ ಕಾರ್ಯನಿರ್ವಹಣೆಯ ಕುರಿತು ಚರ್ಚಿಸಿದ್ದಾರೆ. ಪಿತೃಪ್ರಧಾನ ಸಮಾಜದಲ್ಲಿ ಧಾರ್ಮಿಕ ಸಂರಚನೆಯಾಗಿ, ವಂಶೀಯತೆ ಸ್ಥಾಪನೆ, ಸ್ತ್ರೀ ಲೈಂಗಿಕತೆಯನ್ನು ನಿಯಂತ್ರಿಸುವ ವಿವಾಹ ಸಂಸ್ಥೆ, ಬಹುಪತ್ನಿತ್ವ, ಬಹುಪತಿತ್ವ, ಏಕಪತ್ನಿತ್ವ ಅಥವಾ ಏಕಪತಿತ್ವ, ಕುಟುಂಬ ವ್ಯವಸ್ಥೆಯನ್ನು ಹೇಳುವುದರ ಜೊತೆಗೆ ಸ್ತ್ರೀವಾದಿ ಸಂಕಥನಗಳನ್ನು ತಿಳಿಸಲಾಗಿದೆ. ಸ್ತ್ರೀವಾದ ದೃಷ್ಟಿಕೋನದಿಂದ ಧರ್ಮದ ವಿಶ್ಲೇಷಣೆಯನ್ನು ಮಾಡುವಾಗ ಆದರ್ಶನಾರಿ ಸಿದ್ಧಾಂತ ವಿಮರ್ಶೆ, ಮಹಿಳೆಯರಿಗಾಗಿ ರೂಪಿತವಾದ

ಆದರ್ಶಗಳು, ಶೀಲ, ಪಾವಿತ್ರ್ಯ, ಪಾತಿವ್ರತ್ಯ, ತಾಯ್ತನ ಮತ್ತು ವೈಧವ್ಯ ಪರಿಕಲ್ಪನೆಗಳನ್ನು ಚರ್ಚಿಸಲಾಗಿದೆ.

ಕನ್ನಡ ರಂಗಭೂಮಿಯಲ್ಲಿ ಮಹಿಳೆಯರ ಪಾತ್ರದ ಕುರಿತು ಅಸ್ತಿತ್ವದಲ್ಲಿರುವ ಸಾಹಿತ್ಯವು ಸಾಂಪ್ರದಾಯಿಕ ಆಧುನಿಕ ಬದಲಾವಣೆಗಳಿಂದ ಹೆಚ್ಚು ಬಹುಮುಖಿ ಮತ್ತು ಸಬಲೀಕರಣಗೊಂಡ ಪಾತ್ರಗಳಿಗೆ ಮಹಿಳಾ ಪ್ರಾತಿನಿಧ್ಯಗಳ ವಿಕಸನವನ್ನು ಒತ್ತಿಹೇಳುತ್ತದೆ. ಈ ರೂಪಾಂತರವು ಐತಿಹಾಸಿಕ ಬದಲಾವಣೆಗಳು, ಉದ್ಯಮದಲ್ಲಿನ ಪ್ರಭಾವಶಾಲಿ ಮಹಿಳಾ ವ್ಯಕ್ತಿಗಳು, ಜಾಗತೀಕರಣ ಮತ್ತು ಸ್ತ್ರೀವಾದಿ ಚಳುವಳಿಗಳ ಪ್ರಭಾವಕ್ಕೆ ಕಾರಣವಾಗಿದೆ, ಇವೆಲ್ಲವೂ ಒಟ್ಟಾಗಿ ಪ್ರತಿಬಿಂಬಿಸುತ್ತವೆ ಮತ್ತು ಕರ್ನಾಟಕದಲ್ಲಿ ಬದಲಾಗುತ್ತಿರುವ ಸಾಮಾಜಿಕ ರೂಢಿಗಳು ಮತ್ತು ಮೌಲ್ಯಗಳಿಗೆ ಕೊಡುಗೆ ನೀಡುತ್ತವೆ. ಕನ್ನಡ ರಂಗಭೂಮಿಯಲ್ಲಿ ಬದಲಾಗುತ್ತಿರುವ ಈ ಪ್ರಾತಿನಿಧ್ಯಗಳ ಆಳವಾದ ವಿಶ್ಲೇಷಣೆಯನ್ನು ಒದಗಿಸುವ ಮೂಲಕ ಬೆಳೆಯುತ್ತಿರುವ ಈ ಸಾಹಿತ್ಯ ಸಮೂಹಕ್ಕೆ ಕೊಡುಗೆ ನೀಡುವ ಗುರಿಯನ್ನು ಈ ವಿಮರ್ಶಾತ್ಮಕ ಅಧ್ಯಯನ ಹೊಂದಿದೆ.

**ವಿಧಾನಶಾಸ್ತ್ರ:**

ನಾಟಕಗಳ ಆಯ್ಕೆ ಮತ್ತು ವಿಷಯ ವಿಶ್ಲೇಷಣೆ: ಪ್ರಮುಖ ಮತ್ತು ಪ್ರಭಾವಶಾಲಿ ಕೃತಿಗಳ ಮೇಲೆ ಕೇಂದ್ರೀಕರಿಸಿ, ವಿವಿಧ ದಶಕಗಳ ಕನ್ನಡ ನಾಟಕಗಳ ಪ್ರತಿನಿಧಿ ಮಾದರಿಯನ್ನು ಆಯ್ಕೆಮಾಡಿಕೊಳ್ಳಲಾಗುತ್ತದೆ. ಈ ನಾಟಕಗಳಲ್ಲಿನ ನಿರೂಪಣೆಗಳು, ಪಾತ್ರ ಅಭಿವೃದ್ಧಿ ಮತ್ತು ಮಹಿಳೆಯರ ಚಿತ್ರಣವನ್ನು ನಿರ್ಣಯಿಸಲು ವಿಷಯ ವಿಶ್ಲೇಷಣೆಯನ್ನು ಬಳಸಿಕೊಳ್ಳಬೇಕಾಗುತ್ತದೆ. ಈ ವಿಶ್ಲೇಷಣೆಯು ಬದಲಾಗುತ್ತಿರುವ ಪ್ರವೃತ್ತಿಗಳು ಮತ್ತು ಮಾದರಿಗಳನ್ನು ಗುರುತಿಸುವಲ್ಲಿ ಸಹಾಯ ಮಾಡುತ್ತದೆ.

ಪ್ರಕರಣ ಅಧ್ಯಯನಗಳು: ಕನ್ನಡ ರಂಗಭೂಮಿಯಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಮರುರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿರುವ ನಿರ್ದಿಷ್ಟ ನಾಟಕಗಳನ್ನು ಆಯ್ಕೆಮಾಡಿಕೊಳ್ಳಬೇಕು. ಸಾಮಾಜಿಕ ಗ್ರಹಿಕೆಗಳು ಮತ್ತು ರಂಗಸಜ್ಜಿಕೆಯ ಮೇಲೆ ಅವುಗಳ ಪ್ರಭಾವ ಸೇರಿದಂತೆ ವಿವಿಧ ಕೋನಗಳಿಂದ ಈ ನಾಟಕಗಳನ್ನು ಪರೀಕ್ಷಿಸಲು ಆಳವಾದ ಪ್ರಕರಣ ಅಧ್ಯಯನಗಳನ್ನು ನಡೆಸಬೇಕಾಗುತ್ತದೆ.

**ಫಲಿತಾಂಶಗಳು:**

ಕನ್ನಡ ರಂಗಭೂಮಿಯಲ್ಲಿ ಮಹಿಳೆಯರ ಪಾತ್ರ ಎಂಬ ಈ ವಿಮರ್ಶಾತ್ಮಕ ಅಧ್ಯಯನದ ಫಲಿತಾಂಶಗಳು ಕನ್ನಡ ರಂಗಭೂಮಿಯ ಸಮಗ್ರ ವಿಶ್ಲೇಷಣೆ, ವಿವಿಧ ಸಂಶೋಧನಾ ಪತ್ರಿಕೆಗಳು, ಸಂದರ್ಶನಗಳು, ಸಮೀಕ್ಷೆಗಳು ಮತ್ತು ವಿಷಯ ವಿಶ್ಲೇಷಣೆಯನ್ನು ಆಧರಿಸಿವೆ. ಈ ಫಲಿತಾಂಶಗಳು ಕನ್ನಡ ರಂಗಭೂಮಿಯಲ್ಲಿ ಮಹಿಳೆಯರ ಚಿತ್ರಣದಲ್ಲಿ ಹಲವು ವರ್ಷಗಳಲ್ಲಿ ಆದ ಗಮನಾರ್ಹ ಬದಲಾವಣೆಗಳನ್ನು ವಿವರಿಸುತ್ತವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ತಿಳಿಸಲಾಗಿದೆ.

1. ಐತಿಹಾಸಿಕ ಪರಿವರ್ತನೆ: ಆರಂಭಿಕ ಕನ್ನಡ ನಾಟಕಗಳ ವಿಶ್ಲೇಷಣೆಯು ಮಹಿಳೆಯರ ಸಾಂಪ್ರದಾಯಿಕ ಮತ್ತು ಆಧುನಿಕತೆ ಚಿತ್ರಣಗಳ ಪ್ರಾಬಲ್ಯವನ್ನು ತೋರಿಸುತ್ತದೆ. ಸಾಮಾನ್ಯವಾಗಿ ವಿಧೇಯ ಪತ್ನಿಯರು, ಶ್ರದ್ಧಾಭರಿತ ತಾಯಂದಿರು ಅಥವಾ ಪ್ರೇಮ ಆಸಕ್ತಿಗಳ ಪಾತ್ರಗಳಿಗೆ ಸೀಮಿತವಾಗಿರುತ್ತದೆ. ಆದಾಗ್ಯೂ, ದಶಕಗಳಲ್ಲಿ, ಹೆಚ್ಚು ಕ್ರಿಯಾತ್ಮಕ, ಸ್ವತಂತ್ರ ಮತ್ತು ಸಬಲೀಕೃತ ಮಹಿಳಾ ಪಾತ್ರಗಳ ಕಡೆಗೆ ಸ್ಪಷ್ಟವಾದ

ಬದಲಾವಣೆ ಕಂಡುಬಂದಿದೆ.

2. ಪ್ರಮುಖ ಮಹಿಳಾ ವ್ಯಕ್ತಿಗಳ ಪ್ರಭಾವ: ಬಳ್ಳಾರಿ ಲಲಿತಮ್ಮ, ಸುಭದ್ರಮ್ಮ ಮನ್ಸೂರ್, ಮರಿಯಮ್ಮನಹಳ್ಳಿ ನಾಗರತ್ನಮ್ಮ, ಆರ್.ನಾಗರತ್ನಮ್ಮ, ಉಮಾಶ್ರೀ ಅವರಂತಹ ಪ್ರಮುಖ ಮಹಿಳಾ ಕಲಾವಿದೆಯರು ಕನ್ನಡ ರಂಗಭೂಮಿಯಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಪುನರ್‌ರೂಪಿಸುವಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ ಪ್ರಭಾವಿ ವ್ಯಕ್ತಿಗಳಾಗಿ ಹೊರಹೊಮ್ಮಿದರು. ಅಭಿನಯ ಮತ್ತು ರಂಗಸಂಗೀತ ಹಾಡುಗಾರಿಕೆಗೆ ಅವರ ಕೊಡುಗೆಗಳು ಅಪಾರವಾಗಿವೆ.
3. ಸ್ತ್ರೀವಾದಿ ಚಲನಚಿತ್ರ ಅಂಶಗಳು: ಸ್ತ್ರೀವಾದಿ ನಾಟಕ ಸಿದ್ಧಾಂತದ ವಿಶ್ಲೇಷಣೆಯು ಹಲವಾರು ಕನ್ನಡ ನಾಟಕಗಳಲ್ಲಿ ಸ್ತ್ರೀವಾದಿ ಅಂಶಗಳ ಉಪಸ್ಥಿತಿಯನ್ನು ಬಹಿರಂಗಪಡಿಸಿತು. ಈ ಅಂಶಗಳು ಮಹಿಳಾ-ಕೇಂದ್ರಿತ ನಿರೂಪಣೆಗಳು, ಸ್ತ್ರೀ-ಕೇಂದ್ರಿತ ಕಥೆ ಹೇಳುವಿಕೆ ಮತ್ತು ಸಾಂಪ್ರದಾಯಿಕ ಲಿಂಗ ಪಾತ್ರಗಳ ವಿಘಟನೆಯನ್ನು ಒಳಗೊಂಡಿವೆ. ಚಲನಚಿತ್ರಗಳಲ್ಲಿ ಸ್ತ್ರೀವಾದಿ ದೃಷ್ಟಿಕೋನಗಳ ಸೇರ್ಪಡೆಯು ಸಾಮಾಜಿಕ ರೂಢಿಗಳನ್ನು ಪ್ರಶ್ನಿಸುತ್ತದೆ.
4. ಜಾಗತೀಕರಣ ಮತ್ತು ಸಾಮಾಜಿಕ-ಸಾಂಸ್ಕೃತಿಕ ಪ್ರಭಾವ: ಜಾಗತೀಕರಣ, ಅಂತರರಾಷ್ಟ್ರೀಯ ವಿಷಯಕ್ಕೆ ಹೆಚ್ಚಿದ ಪ್ರವೇಶ ಮತ್ತು ಸಮಕಾಲೀನ ಸ್ತ್ರೀವಾದಿ ಚಳುವಳಿಗಳು ಕನ್ನಡ ರಂಗಭೂಮಿಯ ಮೇಲೆ ಪ್ರಭಾವ ಬೀರಿವೆ ಎಂದು ಫಲಿತಾಂಶಗಳು ಸೂಚಿಸಿವೆ. ಈ ಬಾಹ್ಯ ಪ್ರಭಾವಗಳು ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳನ್ನು ಪ್ರತಿಬಿಂಬಿಸುವ ಮಹಿಳೆಯರ ಹೆಚ್ಚು ವೈವಿಧ್ಯಮಯ ಮತ್ತು ಪ್ರಗತಿಪರ ಚಿತ್ರಣಕ್ಕೆ ಕೊಡುಗೆ ನೀಡಿವೆ.
5. ಪ್ರೇಕ್ಷಕರ ಆದ್ಯತೆಗಳು: ವೈವಿಧ್ಯಮಯ ಪ್ರೇಕ್ಷಕರಲ್ಲಿ ನಡೆಸಿದ ಸಮೀಕ್ಷೆಗಳು ಸಬಲೀಕರಣಗೊಂಡ ಮತ್ತು ಸಾಪೇಕ್ಷ ಮಹಿಳಾ ಪಾತ್ರಗಳನ್ನು ಒಳಗೊಂಡ ನಾಟಕಗಳಿಗೆ ಹೆಚ್ಚುತ್ತಿರುವ ಆದ್ಯತೆಯನ್ನು ಪ್ರದರ್ಶಿಸಿವೆ. ಸಾಂಪ್ರದಾಯಿಕ ಲಿಂಗ ರೂಢಿಗಳನ್ನು ಪ್ರಶ್ನಿಸುವ ಸನ್ನಿವೇಶಗಳನ್ನು ಕಾಣಬಹುದು.
6. ಪರಿಮಾಣಾತ್ಮಕ ದತ್ತಾಂಶ ವಿಶ್ಲೇಷಣೆ: ಪರಿಮಾಣಾತ್ಮಕ ದತ್ತಾಂಶದ ವಿಶ್ಲೇಷಣೆಯು ವರ್ಷಗಳಲ್ಲಿ ಕನ್ನಡ ರಂಗಭೂಮಿಯಲ್ಲಿ ಮಹಿಳಾ ಪಾತ್ರಗಳ ಪ್ರಾಮುಖ್ಯತೆಯಲ್ಲಿ ಕ್ರಮೇಣ ಹೆಚ್ಚಳ ಕಂಡು ಬಂದಿತು. ಇದು ಅವರ ಪಾತ್ರಗಳು ಮತ್ತು ನಿರೂಪಣೆಗೆ ನೀಡಿದ ಕೊಡುಗೆಗಳ ಮೇಲೆ ಹೆಚ್ಚು ಗಮನಹರಿಸುವಂತೆ ಮಾಡಲಾಗಿದೆ.
7. ಪ್ರಕರಣ ಅಧ್ಯಯನಗಳು: ಕನ್ನಡ ರಂಗಭೂಮಿಯಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಮರುರೂಪಿಸುವಲ್ಲಿ ಪ್ರಮುಖ ಮೈಲಿಗಲ್ಲುಗಳಾಗಿ ಗುರುತಿಸಲಾದ ನಿರ್ದಿಷ್ಟ ನಾಟಕಗಳು ಅಂದರೆ ಒಡಲಾಳ, ರಕ್ತರಾತ್ರಿ, ಪೌರಾಣಿಕ, ಸಾಮಾಜಿಕ, ಐತಿಹಾಸಿಕ ನಾಟಕಗಳನ್ನು ಆಳವಾಗಿ ಅನ್ವೇಷಿಸಲಾಯಿತು. ಈ ಪ್ರಕರಣ ಅಧ್ಯಯನಗಳು ಬದಲಾಗುತ್ತಿರುವ ಸಾಮಾಜಿಕ ಗ್ರಹಿಕೆಗಳು ಮತ್ತು ನಾಟಕ ಪ್ರವೃತ್ತಿಗಳ ಮೇಲೆ ಈ ನಾಟಕಗಳ ಪ್ರಭಾವವನ್ನು ಮತ್ತಷ್ಟು ವಿವರಿಸುತ್ತವೆ.

**ಉಪಸಂಹಾರ:**

"ಕನ್ನಡ ರಂಗಭೂಮಿಯಲ್ಲಿ ಮಹಿಳೆಯರ ಪಾತ್ರ:" ಎಂಬ ವಿಮರ್ಶಾತ್ಮಕ

ಅಧ್ಯಯನವು ಕನ್ನಡ ರಂಗಭೂಮಿಯಲ್ಲಿ ಮಹಿಳೆಯರ ಚಿತ್ರಣದಲ್ಲಿ ಒಂದು ಕ್ರಿಯಾತ್ಮಕ ಬೆಳವಣಿಗೆಯನ್ನು ತಿಳಿಸುತ್ತದೆ. ಐತಿಹಾಸಿಕ, ಸಾಮಾಜಿಕ–ಸಾಂಸ್ಕೃತಿಕ ಮತ್ತು ನಾಟಕದ ಆಯಾಮಗಳನ್ನು ಒಳಗೊಂಡ ಬಹು ಆಯಾಮದ ವಿಶ್ಲೇಷಣೆಯ ಮೂಲಕ, ಈ ಅಧ್ಯಯನವು ರಂಗಭೂಮಿಯಲ್ಲಿ ಮಹಿಳೆಯರ ಪಾತ್ರಗಳು ಮತ್ತು ಗುರುತುಗಳ ರೂಪಾಂತರದ ಬಗ್ಗೆ ಅತ್ಯುತ್ತಮವಾದ ಒಳಸುಳಿಗಳನ್ನು ನೀಡುತ್ತದೆ.

ಐತಿಹಾಸಿಕ ದೃಷ್ಟಿಕೋನವು ಆರಂಭಿಕ ಕನ್ನಡ ನಾಟಕ ಮಹಿಳೆಯರ ಸಾಂಪ್ರದಾಯಿಕ ಮತ್ತು ಆಧುನಿಕತೆಯ ಬದಲಾವಣೆಯ ಚಿತ್ರಣಗಳ ಪ್ರಚಲಿತತೆಯನ್ನು ಎತ್ತಿ ತೋರಿಸಿದೆ. ಆದಾಗ್ಯೂ, ಹಲವು ವರ್ಷಗಳಲ್ಲಿ, ಹೆಚ್ಚು ಪ್ರಗತಿಪರ ಮತ್ತು ಸೂಕ್ಷ್ಮ ಪ್ರಾತಿನಿಧ್ಯಗಳ ಕಡೆಗೆ ಸ್ಪಷ್ಟವಾದ ಬದಲಾವಣೆ ಕಂಡುಬಂದಿದೆ. ಈ ರೂಪಾಂತರವು ರಂಗಭೂಮಿ ವಲಯವನ್ನು ಮರುರೂಪಿಸುವಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ ಸುಭದ್ರಮ್ಮ ಮನ್ಸೂರ್, ಬಳ್ಳಾರಿ ಲಲಿತಮ್ಮ, ಮರಿಯಮ್ಮನಹಳ್ಳಿ ನಾಗರತ್ನಮ್ಮ, ಉಮಾಶ್ರೀ ಅವರಂತಹ ಉದ್ಯಮದ ಪ್ರಮುಖ ಮಹಿಳಾ ವ್ಯಕ್ತಿಗಳ ಪ್ರವರ್ತಕ ಪ್ರಯತ್ನಗಳಿಂದ ಪ್ರಭಾವಿತವಾಗಿದೆ.

ಸ್ತ್ರೀವಾದಿ ನಾಟಕ ಸಿದ್ಧಾಂತ ವಿಶ್ಲೇಷಣೆಯು ಅನೇಕ ಕನ್ನಡ ನಾಟಕಗಳಲ್ಲಿ ಸ್ತ್ರೀವಾದಿ ಅಂಶಗಳ ಉಪಸ್ಥಿತಿಯನ್ನು ಮತ್ತಷ್ಟು ಬಹಿರಂಗಪಡಿಸಿತು, ಇದು ಸಾಂಪ್ರದಾಯಿಕ ಲಿಂಗ ಮಾನದಂಡಗಳನ್ನು ಸವಾಲು ಮಾಡುತ್ತದೆ ಮತ್ತು ಮರು ವ್ಯಾಖ್ಯಾನಿಸುತ್ತದೆ. ಜಾಗತೀಕರಣ ಮತ್ತು ಸಮಕಾಲೀನ ಸ್ತ್ರೀವಾದಿ ಚಳುವಳಿಗಳ ಪ್ರಭಾವವು ಮಹಿಳೆಯರ ಹೆಚ್ಚು ವೈವಿಧ್ಯಮಯ ಮತ್ತು ಸಬಲೀಕರಣಗೊಂಡ ಚಿತ್ರಣಗಳಿಗೆ ಕೊಡುಗೆ ನೀಡಿದೆ. ಸ್ವತಂತ್ರ ಮತ್ತು ಸಾಪೇಕ್ಷ ಮಹಿಳಾ ಪಾತ್ರಗಳನ್ನು ಪ್ರದರ್ಶಿಸುವ ನಾಟಕಗಳಿಗೆ ಪ್ರೇಕ್ಷಕರು ಹೆಚ್ಚಿನ ಆದ್ಯತೆಯನ್ನು ತೋರಿಸಿದ್ದಾರೆ. ಉದಾಹರಣೆಗೆ ಸುಭದ್ರಮ್ಮ ಮನ್ಸೂರ್ ಅವರು ರಕ್ತರಾತ್ರಿ ನಾಟಕದಲ್ಲಿ ದ್ರೌಪದಿಯ ಪಾತ್ರವನ್ನು ಅಭಿನಯಿಸುವದನ್ನು ನೋಡುವುದಕ್ಕಾಗಿ ನೂರಾರು ಪ್ರೇಕ್ಷಕರು ಒನ್ಸ್ ಮೋರ್ ಕೂಗುವುದು ಪ್ರಮುಖವಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಅಕ್ಷರ ಕೆ. ವಿ., (2009), ರಂಗಭೂಮಿಯ ಮುಖಾಂತರ, ಹೆಗ್ಗೋಡು: ಅಕ್ಷರ ಪ್ರಕಾಶನ.
2. ಕೇಶವಶರ್ಮ, (2013), ಸ್ತ್ರೀವಾದಿ ಪರಿಕಲ್ಪನೆಗಳು, ಬೆಂಗಳೂರು: ಪುಸ್ತಕ ಪ್ರಕಾಶನ.
3. ಗುಡಿಹಳ್ಳಿ ನಾಗರಾಜ, (2013), ಮರಿಯಮ್ಮನಹಳ್ಳಿ ರಂಗಸಿರಿ ನಾಗರತ್ನಮ್ಮನವರ ಆತ್ಮಕಥೆ, ಬೆಂಗಳೂರು: ಬರಹ ಪಬ್ಲಿಷಿಂಗ್ ಹೌಸ್.
4. ಗುಡಿಹಳ್ಳಿ ನಾಗರಾಜ, (2017), ಗಾನಕೋಗಿಲೆ ಅನುಪಮ ಅಭಿನೇತ್ರಿ ಸುಭದ್ರಮ್ಮ ಮನ್ಸೂರು, ಬಳ್ಳಾರಿ: ಅಕ್ಷರತೋರಣ.
5. ಗುರುಪ್ರಸಾದ್ ಎಚ್. ಎಸ್., (2008), ವಲಸಿಗರ ನೆಲೆ ಮರಿಯಮ್ಮನಹಳ್ಳಿ ಸಂಕಥನ, ಚಿಕ್ಕಮಗಳೂರು: ಅಪರಂಜಿ ಪ್ರಕಾಶನ.
6. ದಳವಾಯಿ ವೆಂಕಟಗಿರಿ, (2000), ಕನ್ನಡ ರಂಗಭೂಮಿ ಮತ್ತು ಮಹಿಳೆ: ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ (ಪಿಎಚ್.ಡಿ. ಮಹಾಪ್ರಬಂಧ), ಗುಲಬರ್ಗಾ: ಗುಲಬರ್ಗಾ ವಿಶ್ವವಿದ್ಯಾಲಯ.
7. ಪುಷ್ಪ ಎಚ್. ಎಲ್., (2015), ರಂಗಭೂಮಿ ಮತ್ತು ಮಹಿಳೆ, ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ.
8. ಮರುಳಸಿದ್ದಪ್ಪ ಕೆ., (1995), ಆಧುನಿಕ ಕನ್ನಡ ನಾಟಕ, ಬೆಂಗಳೂರು: ಲಿಪಿ ಪ್ರಕಾಶನ.
9. ಮಂಗಳಾ ಪ್ರಿಯದರ್ಶಿನಿ ಡಿ., (2007), ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಪ್ರವೇಶಿಕೆ, ಹಂಪಿ: ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ.
10. ರಂಗನಾಥ ಎಚ್. ಕೆ., (1990), ಕನ್ನಡ ರಂಗಭೂಮಿಯ ವಿಕಾಸ, ಮೈಸೂರು: ಅಭಿನಯ.
11. ವೀರಭದ್ರಪ್ಪ ಕುಂ., (1998), ಸುಭದ್ರಮ್ಮ ಮನ್ಸೂರು, ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ.
12. ವೈಕುಂಠರಾಜು ಬಿ. ವಿ., (1997), ಕನ್ನಡ ರಂಗಭೂಮಿ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
13. ಶೇಖ್ ಎಲ್. ಬಿ. ಮತ್ತು ಎಚ್. ಎಲ್. ಪುಷ್ಪ, (2015), ರಂಗಭೂಮಿ ಮತ್ತು ಮಹಿಳೆ, ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ.
14. ಶಿವಾನಂದ ಎಸ್. ವಿರಕ್ತಮಠ, (2018), ಮಹಿಳೆ ಮತ್ತು ಧರ್ಮ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
15. ಶೈಲಜಾ ಹಿರೇಮಠ, (2017), ಪಾತರದವರು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
16. ಸಿಂಧುವಳ್ಳಿ ಅನಂತಮೂರ್ತಿ ಮತ್ತು ಎಚ್. ಕೆ. ರಾಮನಾಥ್, (1984), ಕರ್ನಾಟಕ ರಂಗಭೂಮಿ ನೆನ್ನೆ ಇಂದು ನಾಳೆ, ಮೈಸೂರು: ಲಲಿತಕಲಾ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ.